

ಕಿರುಚಿತ್ರ

# ಆತ್ಮಹತ್ಯೆಯ ಟ್ರಿಕ್ಸ್!

**ಯಾವುದೋ ಗಹನವಾದ ವಸ್ತುವಿಗೆ ಮುಖಾಮುಖಿಯಾಗುತ್ತದೆ ಎಂದು ಭ್ರಮೆ ಹುಟ್ಟಿಸುವ ಈ ಕಿರುಚಿತ್ರ ನಡುವಲ್ಲಿಯೇ ಗಿಮಿಕ್‌ಗೆ ಬಲಿಯಾಗಿ ಭ್ರಮನಿರಸನಗೊಳಿಸುತ್ತದೆ.**

■ ಗೌರಿ

ಸಿನಿಮಾ ‘ರಂಜನೆಯ ಕಲೆ’ ಎಂಬುದು ಖಚಿತವಾದ ಸತ್ಯ. ಆದರೆ ರಂಜನೆಯ ವ್ಯಾಖ್ಯಾನ ಒಬ್ಬರಿಂದ ಒಬ್ಬರಿಗೆ ಭಿನ್ನವಾಗಿರುತ್ತದಷ್ಟೆ. ಒಬ್ಬರಿಗೆ ಮೈಮರೆಸಿ ಮತ್ತೊಂದು ಜಗತ್ತಿನೊಳಗೆ ಸುತ್ತಾಡಿಸಿ ಮತ್ತೆ ಕರೆತಂದು ವಾಸ್ತವದ ಜಗತ್ತಿಗೆ ಬಿಡುವ ವಿಮಾನವಾಗಿ ಸಿನಿಮಾ ಕಾಣಿಸಿದರೆ, ಇನ್ನೊಬ್ಬರಿಗೆ ತಾನು ನೋಡುತ್ತಿರುವುದು ಸಿನಿಮಾ ಎಂಬ ಎಚ್ಚರವನ್ನು ಮರೆಸದೇ, ತೆರೆಯ ಮೇಲೆ ಬದುಕಿನ ಆಳದ, ಸಂಕೀರ್ಣ ಆಯಾಮಗಳನ್ನು ತೆರೆದು ತೋರಿಸುವುದು, ಆ ಮೂಲಕ ನಮ್ಮೊಳಗನ್ನು ನಾವೇ ನೋಡಿಕೊಳ್ಳುವಂತೆ ಮಾಡುವುದು, ಮೈಮರೆತು ಬದುಕುತ್ತಿರುವ ನಮಗೆ ಹೊಸ ಎಚ್ಚರ ಕೊಡುವ ಅರಿವಿನ ಚಿಕಿತ್ಸೆಯಾಗಿ ಸಿನಿಮಾ ಕಾಣುತ್ತದೆ. ಈ ಎರಡೂ ಒಂದು ಮಾಧ್ಯಮವನ್ನು ಪರಿಭಾವಿಸುವ ಎರಡು ಅಂಚುಗಳು. ಈ ಅಂಚುಗಳ ನಡುವಿನ ಪ್ರಯಾಣದಲ್ಲಿಯೇ ಹಲವು ಒಳ್ಳೆಯ ಸಿನಿಮಾಗಳು ರೂಪುಗೊಳ್ಳುತ್ತವೆ.

ರಂಜನೆಯ ಉದ್ದೇಶವನ್ನಷ್ಟೇ ಪೂರೈಸಲು ಹೊರಟ ಸಿನಿಮಾಗಳು ಒಳಗೆ ಬರೀ ಪೊಳ್ಳಾಗಿರುತ್ತವೆ. ಆದರೆ ಬಹುತೇಕರು ಆಯ್ದುಕೊಳ್ಳುವುದು ಈ ದಾರಿಯನ್ನೇ. ಯಾಕೆಂದರೆ ಇದು ಸುಲಭ. ಆದರೆ ಇದನ್ನು ಕಲೆ ಅನ್ನುವುದಕ್ಕಿಂತ ‘ಟ್ರಿಕ್ಸ್’ ಅನ್ನುವುದೇ ಹೆಚ್ಚು ಸೂಕ್ತವೇನೋ.

‘ಮಿಥಾಲಿ’ ಎಂಬ ಕಿರುಚಿತ್ರವೂ ಇಂಥದ್ದೊಂದು ಟ್ರಿಕ್ಸ್ ಮೇಲೆಯೇ ನಿಂತಿದೆ. ಒಂದು ಆಸಕ್ತಿದಾಯಕ ಫ್ಲಾಟ್ ಅನ್ನು ನಿರ್ಮಿಸುವ ಈ ಕಿರುಚಿತ್ರ ನಂತರ ಅದರ ಮೇಲೆ ಎರ್ರಾಬಿರ್ರಿ ಕುಣಿತ ಆರಂಭಿಸಿ ನಿರಾಸೆ ಹುಟ್ಟಿಸುತ್ತದೆ.

ಒಬ್ಬ ಜನಪ್ರಿಯ ಕಾದಂಬರಿಕಾರನ ಆತ್ಮಹತ್ಯಾ ಪತ್ರದೊಂದಿಗೆ ಈ ಕಿರುಚಿತ್ರ ಆರಂಭವಾಗುತ್ತದೆ.

ಮಿಥಾಲಿ ಅವನ ಹೆಂಡತಿ. ಅವನು ತನ್ನ ಹೆಂಡತಿಗೆ ಪತ್ರ ಬರೆಯುತ್ತಿದ್ದಾನೆ. ‘ನನ್ನ ಕಾದಂಬರಿಗಳಲ್ಲಿ ಚಿತ್ರಿಸಿದ ಹಾಗೆ ರಮ್ಯವಾಗಿ ನಿನ್ನೊಂದಿಗೆ ಬದುಕಲು ಸಾಧ್ಯವಿದ್ದರೆ ಎಷ್ಟು ಚೆಂದವಿತ್ತು. ಆದರೆ ನಾನು ನಿನ್ನನ್ನು ಸಂತೋಷವಾಗಿಡಲೇ ಇಲ್ಲ. ನನ್ನ ಈ ಪರಿಸ್ಥಿತಿಗೆ ನಾನೇ ಕಾರಣ. ನನಗೆ ಬೇರೆ ದಾರಿಯೇ ಇಲ್ಲ ಈಗ...’ ಹೀಗೆ ತನ್ನ ಬದುಕನ್ನು ತಿರುಗಿ ನೋಡಿದ ಹಾಗೆ ಪಾಪನಿವೇದನೆಯ ಧ್ವನಿಯಲ್ಲಿ ಅವನು ಪತ್ರವನ್ನು ಬರೆಯುತ್ತಿದ್ದಾನೆ. ಅದೇ ಸಮಯದಲ್ಲಿ ಅವನ ಹೆಂಡತಿ ಮಿಥಾಲಿಯೂ ಬರುತ್ತಾಳೆ. ಅವಳೆದುರು ಮದ್ಯಸೇವನೆ ಮಾಡುತ್ತ ಖಿನ್ನನಾಗಿರುವಂತೆ ನಟಿಸುವ ಕಾದಂಬರಿಕಾರ ನಂತರ ಆ ಆತ್ಮಹತ್ಯಾ ಪತ್ರದ ಕೊನೆಯಲ್ಲಿ ಮಿಥಾಲಿಯ ಹೆಸರು ಬರೆದುಬಿಡುತ್ತಾನೆ. ಅಂದರೆ ಅವಳ ಆತ್ಮಹತ್ಯಾಪತ್ರವನ್ನು ಇವನೇ ಬರೆದು ಅವಳನ್ನು ಸಾಯಿಸುತ್ತಾನೆ. ನಂತರ ಮತ್ತೊಂದು ಹುಡುಗಿಯ ಜೊತೆಗೆ ಇರುತ್ತಾನೆ ಎಂಬಲ್ಲಿಗೆ ಈ ಕಿರುಚಿತ್ರ ಮುಗಿಯುತ್ತದೆ.



**ಹೆಸರು: ಮಿಥಾಲಿ**
**ನಿರ್ದೇಶನ: ನೈತಿಕ್ ರಾವಲ್**
**ತಾರಾಗಣ: ನಯನ್ ಶುಕ್ಲಾ, ಅದಿತಿ**
**ಛಾಯಾಗ್ರಹಣ: ಜಿಗ್ನೇಷ್ ಪಾಂಡ್ಯ**

ಆತ್ಮಹತ್ಯಾ ಪತ್ರದ ಕೊನೆಯ ಸಹಿಯನ್ನು ಬದಲಿಸುವುದಕ್ಕೆ ನಿರ್ದೇಶಕರ ಟ್ರಿಕ್ಸ್ ಹೊರತಾದ ಯಾವ ಸಮರ್ಥನೆಯೂ ಕಾಣುವುದಿಲ್ಲ. ತಾರ್ಕಿಕವಾಗಿಯೂ ಅದಕ್ಕೆ ನಂಬಬಹುದಾದ ದಾರಿಗಳಿಲ್ಲ. ಬರೀ ನಾಲ್ಕು ನಿಮಿಷದ ಈ ಕಿರುಚಿತ್ರದಲ್ಲಿ ಒಂದಿಷ್ಟು ಶಾಟ್‌ಗಳ ಮೂಲಕ ತಿರುವು ಮುರುವಾಗುವ ಸನ್ನಿವೇಶಗಳನ್ನು ಕಾಣಿಸುವ ರೀತಿ ನಮ್ಮ ಮನಸ್ಸನ್ನು ತಟ್ಟುವುದಿಲ್ಲ. ಅದೊಂದು ಟ್ರಿಕ್ಸ್ ಆಗಿ ಕೂಡ ಕನ್ವಿನ್ಸ್ ಆಗುವುದಿಲ್ಲ.

ಇಡಿ ಕಿರುಚಿತ್ರದಲ್ಲಿ ಗಮನಿಸಬೇಕಾದ ಅಂಶವೆಂದರೆ ಛಾಯಾಗ್ರಹಣ. ಪಾತ್ರಗಳ ಮುಖಭಾವಕ್ಕಿಂತ ಉಳಿದ ಪರಿಕರಗಳ ಮೂಲಕವೇ ಅವರು ಕಥನವನ್ನು ಅದರ ಅನುಭವದೊಟ್ಟಿಗೇ ಕಟ್ಟಲು ಯತ್ನಿಸಿರುವುದು ಗಮನಸೆಳೆಯುವಂತಿದೆ. ಆದರೆ ಅವರ ಪ್ರಯತ್ನಕ್ಕೆ ಅಡಿಪಾಯವಾದ ಕಥೆಯೇ ಗಟ್ಟಿಯಿಲ್ಲ. ಹಿನ್ನೆಲೆ ಸಂಗೀತವೂ ಗದ್ದಲವನ್ನಷ್ಟೇ ಹುಟ್ಟಿಸುವ ಹಾಗಿದೆ.

ಒಟ್ಟಾರೆ ಒಂದು ಕಳಪೆ ಟ್ರಿಕ್ಸ್ ತೋರಿಸಲಷ್ಟೇ ಈ ಕಿರುಚಿತ್ರ ಯಶಸ್ವಿಯಾಗಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3hKjRkz ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.